ಒ ಎಸ್ ನಂ.**129/2021**
ಪಿ.ಡಬ್ಲ್ಯೂ:**1**

**ದಿನಾಂಕಃ 05.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 4, 6, 7 ಪ್ರತಿವಾದಿ ಪರ ಟಿ. ಶ್ರೀಧರ್ ವಕೀಲರಿಂದಃ-**

ಪ್ರತಿವಾದಿಗಳು ದಾವಾ ಆಸ್ತಿ ಯಾವ ರೀತಿ ಸಂಬಂಧ ಹೊಂದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ 4-5 ವರ್ಷಗಳಿಂದ ನಮಗೆ ತೊಂದರೆ ಕೊಡುತ್ತಿದ್ದಾರೆ. ದಾವಾ ಆಸ್ತಿ ಸರ್ವೇ ನಂ.75/1 ರಲ್ಲಿ ಬರುತ್ತದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಯಾವ ಸರ್ವೇ ನಂಬರ್ ನಲ್ಲಿ ಬರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ವಾದ ಪತ್ರದ 17ನೇ ಪ್ಯಾರಾದಲ್ಲಿ ಪ್ರತಿವಾದಿಯರು ದಾವಾ ಆಸ್ತಿಗೆ ಮಾಲೀಕರು ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದೇನೆ ಆದರೆ ಅವರು ಯಾವ ರೀತಿ ಮಾಲೀಕರು ಎಂದು ನನಗೆ ಗೊತ್ತಿಲ್ಲ. ಕೆ. ಮುನಿರೆಡ್ಡಿ ರವರ ಮುಖಾಂತರ ನಾನು IHC No.18/86/87 ರ ಬಗ್ಗೆ ತಿಳಿದುಕೊಂಡಿದ್ದೆನು. IHC No.18/86/87 ಇದು ಮುಟ್ಯೇಷನ್ ಆದೇಶ ಆಗಿರುತ್ತದೆ. IHC No.18/86/87 ಅದರ ಪ್ರಕಾರ 1 ಎಕರೆ ಆಸ್ತಿ 4 ಜನರ ಹೆಸರಿನಲ್ಲಿ ಕಾಣಿಸಿತ್ತು, ಅದರ ಪ್ರಕಾರ ಯಾರ ಹೆಸರಿಗೆ ಯಾವ ಆಸ್ತಿ ಎನ್ನುವುದು ನನಗೆ ಗೊತ್ತಿಲ್ಲ. IHC No.18/86/87 ರ ಆದೇಶದ ಪ್ರಕಾರ ಇದು ಸರ್ವೇ ನಂ.75/1, ಕ್ಷೇತ್ರ 3 ಎಕರೆ 12 ಗುಂಟೆಗೆ ಸಂಬಂಧಿಸಿದೆ ಎನ್ನುವುದು ಸರಿಯಲ್ಲ. ಮೇಲೆ ನಾನು ಹೇಳಿದಂತೆ 1 ಎಕರೆ ಆಸ್ತಿಯ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ, ಕೇವಲ ಜೆರಾಕ್ಸ್ ಪ್ರತಿ ಇರುತ್ತದೆ. IHC No.18/86/87 ಇದರ ಆದೇಶದ ಪ್ರತಿಯನ್ನು ಪಡೆಯಲು ಅರ್ಜಿ ಕೊಟ್ಟಿನು, ಆದರೆ ಅದು ಹಾಳಾಗಿದೆ ಎಂದು ನನಗೆ ಹಿಂಬರಹವನು ನೀಡುತ್ತಾರೆ. ಪ್ರತಿವಾದಿಯರು ಮೌಖಿಕವಾಗಿ IHC No.18/86/87 ರ ಆದೇಶದ ಬಗ್ಗೆ ಹೇಳಿದ್ದರಿಂದ ಅದನ್ನು ದಾವೆಯಲ್ಲಿ ಬರೆಸಿರುತ್ತೇನೆ. ಪ್ರತಿವಾದಿಯರು ನನ್ನ ಮುಂದೆ ಆ ಕುರಿತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರಲಿಲ್ಲ.

ಸರ್ವೇ ನಂ.75/1, ಕ್ಷೇತ್ರ 3 ಎಕರೆ 12 ಗುಂಟೆ ಈ ಜಮೀನು ಪ್ರತಿವಾದಿಯವರ ಹಿರಿಯರ ಕಾಲದಿಂದಲು ಅವರ ಸ್ವಾಧೀನಾನುಭವದಲ್ಲಿ ಇದೆ ಎನ್ನುವುದು ಸರಿಯಲ್ಲ. ಪ್ರತಿವಾದಿಗಳ ಅಜ್ಜ ನಂಜುಡಪ್ಪ ಭೂ-ನ್ಯಾಯಮಂಡಳಿಯ ಮುಂದೆ ಸರ್ವೇ ನಂ.75/1, ಕ್ಷೇತ್ರ 3 ಎಕರೆ 12 ಗುಂಟೆ ಜಮೀನು ತಮ್ಮ ಸ್ವಾಧೀನದಲ್ಲಿದೆ ಮತ್ತು ಅದನ್ನು ಮಂಜೂರು ಮಾಡಿ ಎಂದು ಅರ್ಜಿ ಸಲ್ಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಂಜುಡಪ್ಪ ತೀರಿಕೊಂಡ ಮೇಲೆ ಆತನ ಹೆಂಡತಿ ಲಕ್ಷ್ಮಮ್ಮ ಅಂದರೆ ಈ ಪ್ರತಿವಾದಿಗಳ ತಾಯಿ/ ಅಜ್ಜಿ ಹೆಸರಿಗೆ ಭೂ-

ನ್ಯಾಯಮಂಡಳಿಯವರು ಸದರಿ ಆಸ್ತಿಯನ್ನು ಮಂಜೂರು ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅದರ ನಂತರ ಲಕ್ಷ್ಮಮ್ಮ ತೀರಿಕೊಂಡ ಮೇಲೆ ಈ ಪ್ರತಿವಾದಿಗಳು ಸದರಿ ಆಸ್ತಿಯ ಸ್ವಾಧೀನಾನುಭವದಲ್ಲಿ ಇದ್ದಾರೆ ಎನ್ನುವುದು ಸರಿಯಲ್ಲ. ಪ್ರತಿವಾದಿಗಳ ಹೆಸರಿನಲ್ಲಿರುವ ಸದರಿ ಜಮೀನಿಗೆ ವಿಲೇಜ್ ಪಂಚಾಯತ್ ಖಾತಾ ನಂ.724 ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ.

ನನ್ನ ತಂದೆ ಹೆಸರಿನಲ್ಲಿರುವ ಕ್ರಯಪತ್ರ ಮತ್ತು ಈಗ ನನ್ನ ತಾಯಿಯ ಹೆಸರಿನಲ್ಲಿರುವ ಖಾತಾ ಆದಾರದ ಮೇಲೆ ದಾವಾ ಆಸ್ತಿ ನನಗೆ ಸೇರಿದೆ ಎಂದು ಹೇಳುತ್ತಿದ್ದೇನೆ. 1997 ರಲ್ಲಿ ನನ್ನ ತಂದೆ ಹೇಮರಾಮ್ ಚೌದರಿ, ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರಿಂದ ದಾವಾ ಆಸ್ತಿಯನ್ನು ಖರೀದಿಸಿದ್ದಾನೆ. ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರು ಚಂದ್ರಪ್ಪ ಇವರಿಂದ ಆಸ್ತಿಯನ್ನು ಖರೀದಿಸಿದ್ದರು. ಸದರಿ ಚಂದ್ರಪ್ಪ ಈ ದಾವೆಯ 6 ನೇ ಪ್ರತಿವಾದಿಯಾಗಿದ್ದಾನೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾನೆ. ದಿಃ 25.05.1992 ರಲ್ಲಿ ಚಂದ್ರಪ್ಪ ದಾವಾ ಆಸ್ತಿ ಯನ್ನು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರಿಗೆ ಮಾರಾಟ ಮಾಡಿದ್ದಾನೆ. ಆದರೆ ಅದು ಯಾವ ದಾಖಲೆಯ ಪ್ರಕಾರ ಮಾರಾಟ ಮಾಡಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. ಚಂದ್ರಪ್ಪ, ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರಿಗೆ ಆಸ್ತಿ ಮಾರಾಟ ಮಾಡಿದ ದಾಖಲೆಯನ್ನು ನೋಡಿರುವುದಿಲ್ಲ ಮತ್ತು ಆ ಬಗ್ಗೆ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಯಾವ ದಾಖಲೆಯ ಆದಾರದ ಮೇಲೆ ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ದಾವಾ ಆಸ್ತಿಗೆ ಮಾಲೀಕರು ಆಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ, ಆದರೆ ಖಾತೆ ಅವರ ಹೆಸರಿಗೆ ಇತ್ತು. ನನ್ನ ತಂದೆ ದಾವಾ ಆಸ್ತಿ ಖರೀದಿಸುವಾಗ ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರಿಂದ ಯಾವ ಯಾವ ದಾಖಲೆಗಳನ್ನು ಪಡೆದು ಪರಿಶೀಲನೆ ಮಾಡಿದ್ದ ಎನ್ನುವುದು ನನಗೆ ಗೊತ್ತಿಲ್ಲ.

ದಿಃ 30.06.1997 ರಂದು ನನ್ನ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿದ ಮೂಲ ಕ್ರಯಪತ್ರ ಯಾರ ಬಳಿ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಮೂಲ ಕ್ರಯಪತ್ರವನ್ನು ನಾನು ನೋಡಿಲ್ಲ ಅದರ ಪ್ರತಿಯನ್ನು ನೋಡಿದ್ದೇನೆ. 1 ನೇ ವಾದಿ ನನ್ನ ತಾಯಿ. ದಾವಾ ಆಸ್ತಿಯ ಬಗ್ಗೆ ನನ್ನ ತಾಯಿ ನನಗೆ ಯಾವುದೇ ದಾಖಲೆಗಳನ್ನು ತೋರಿಸಿಲ್ಲ. ಈ ದಾವೆ ಜೊತೆಗೆ ಹಾಜರು ಪಡಿಸಿರುವ ದಾಖಲೆಗಳ ಪ್ರತಿಗಳನ್ನು ನಾನು ಪಡೆದಿರುತ್ತೇನೆ, ನನ್ನ ತಾಯಿ ನನಗೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ.

ನನ್ನ ತಂದೆ ತಾಯಿ 1997 ರಲ್ಲಿ ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರ ಜೊತೆ ಮಾಡಿದ ಕ್ರಯದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ನನ್ನ ತಂದೆಗೆ ದಾವಾ ಆಸ್ತಿಯ ಸ್ವಾಧೀನ ಕೊಟ್ಟಿದ್ದರು ಎಂದು ನನ್ನ ತಂದೆ ನನಗೆ ಹೇಳಿದ್ದರು.

ದಾವಾ ಆಸ್ತಿಗಳು ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆ ಇದರ ಭಾಗ ಆಗಿವೆ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯರ ತಾಯಿ/ ಅಜ್ಜಿ ಲಕ್ಷ್ಮಮ್ಮ ತೀರಿಕೊಂಡ ಮೇಲೆ RR No.724 ರಂತೆ ಪ್ರತಿವಾದಿಯರ ಹೆಸರಿಗೆ ವರ್ಗಾವಣೆ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. RR No.724 ನ್ನು ವಿಲೇಜ್ ಪಂಚಾಯತ್ ನಂ.724 ಎಂದು ತೋರಿಸಿ ದಿಃ 30.06.1997 ರಂದು ನನ್ನ ತಂದೆ ಮತ್ತು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಕ್ರಯಪತ್ರಗಳನ್ನು ಸೃಷ್ಟಿ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ದಿಃ 30.06.1997 ರಂದು RR No.724 ರ ಆಸ್ತಿ ಇದು ಯಾರ ಹೆಸರಿಗೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ವಿಲೇಜ್ ಪಂಚಾಯತ್ ನಂ.724 ಇದು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಯವರ ಹೆಸರಿನಲ್ಲಿ ಇತ್ತು. ವಿಲೇಜ್ ಪಂಚಾಯತ್ ನಂ.724 ಇದು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರ ಹೆಸರಿಗೆ ಯಾರ ಹೆಸರಿನಿಂದ ವರ್ಗಾವಣೆ ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ದಿಃ 25.05.1992 ರಂದು ಚಂದ್ರಪ್ಪ ಎನ್ನುವ ವ್ಯಕ್ತಿ ಯಾವುದೇ ನೊಂದಾಯಿತ ದಾಖಲೆಯ ಮುಖಾಂತರ ಸರ್ವೇ ನಂ. 75/1 ರಲ್ಲಿನ ದಾವಾ ಆಸ್ತಿಯನ್ನು ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರಿಗೆ ಮಾರಾಟ ಮಾಡಿಲ್ಲ ಎನ್ನುವುದು ಸರಿಯಲ್ಲ. ಚಂದ್ರಪ್ಪ, ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ರವರಿಗೆ ಮಾರಾಟ ಮಾಡಿದ ಕ್ರಯಪತ್ರದ ಪ್ರತಿಯನ್ನು ನಾನು ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಯಾವುದೇ ನೊಂದಾಯಿತ ದಾಖಲೆಯನ್ನು ಸಬ್ ರಿಜಿಸ್ಟರ್ ಕಚೇರಿಯಿಂದ ಪಡೆಯಬಹುದು ಎನ್ನುವುದು ನನಗೆ ಗೊತ್ತಿಲ್ಲ.

ನಿಪಿ.1 ನ್ನು ನಾನು ಸಬ್ ರಿಜಿಸ್ಟರ್ ಕಚೇರಿಯಿಂದ ಪಡೆದಿದ್ದೇನೆ. ಚಂದ್ರಪ್ಪ, ಶಾಂತಿಲಾಲ್ ಕಾಂಕರೀಯ ಮತ್ತು ವಿಮಲಾದೇವಿ ಇವರಿಗೆ ದಾವಾ ಆಸ್ತಿಯನ್ನು ನೊಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿರುವುದಿಲ್ಲ, ಆದ್ದರಿಂದ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿಲ್ಲ ಎನ್ನುವುದು ಸರಿಯಲ್ಲ. ಚಂದ್ರಪ್ಪನಿಗೆ ದಾವಾ ಆಸ್ತಿಯಲ್ಲಿ ಯಾವ ರೀತಿ ಹಕ್ಕು ಇತ್ತು ಎನ್ನುವುದು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿ ಚಂದ್ರಪ್ಪ ಮತ್ತು ಆತನ ಕುಟುಂಬದ ಸದಸ್ಯರು ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆಯಲ್ಲಿರುವ ದಾವಾ ಸ್ವತ್ತಿನಲ್ಲಿ ಜಂಟಿ ಹಕ್ಕನ್ನು ಹೊಂದಿದ್ದಾರೆ

ಎನ್ನುವುದು ನನಗೆ ಗೊತ್ತಿಲ್ಲ. ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆ ಇದರ ಖಾತೆ ಇವತ್ತಿಗೂ ಕೂಡ ಪ್ರತಿವಾದಿಗಳ ಹೆಸರಿನಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆ ಇದರ ಸ್ವಾಧೀನಾನುಭವದಲ್ಲಿ ಇವತ್ತಿಗೂ ಕೂಡ ಪ್ರತಿವಾದಿಗಳು ಇದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಸರ್ವೇ ನಂ. 75/1, ಕ್ಷೇತ್ರ 3 ಎಕರೆ 12 ಗುಂಟೆ ಇದರ ಭಾಗ ಆಗಿವೆ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ಸದರಿ ಆಸ್ತಿಗೆ ಕಂದಾಯ ಕಟ್ಟುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**